ಬಿ.ಆರ್. ಉಷಾ, ಕೆನಡ
ನಾಯಿಯನ್ನು ಪ್ರೀತಿಸುವಷ್ಟು ತಾಯಿಯನ್ನು ಪ್ರೀತಿಸುವುದಿಲ್ಲ. ಏಕೆ?



ನಾಯಿ ಬುದ್ಧಿವಾದ ಹೇಳುವುದಿಲ್ಲವಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು
'ಸ್ತ್ರೀಕಂಟಕ' ಎಂದರೇನು?
ವಿವಾಹಯೋಗ! ಅದು ಪುರುಷಕಂಟಕವೂ ಹೌದು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ನಿಮಗೆ ಉತ್ತರಿಸಲಾಗದಂತಹ ಪ್ರಶ್ನೆ ಕೇಳಬೇಕೆಂದಿರುವೆ. ಆಗಬಹುದೆ?
ಕಷ್ಟವೇನಿಲ್ಲ. ಅಶ್ಲೀಲ, ಅಸಹ್ಯ ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸಲಾಗುವುದಿಲ್ಲ.

ಬೂಕನಕೆರೆ ವಿಜೇಂದ್ರ, ಮೈಸೂರು
ಮದುವೆ ಆಗಬೇಕೆಂದಿರುವ ಹುಡುಗರೇಕೆ ಗಡ್ಡ ಬಿಡುವುದು?



'ಗಡ್ಡದ ಋಷಿಗಳಿಗೆ ರಂಭೆ, ಊರ್ವಶಿಯರು ಒಲಿದರು. ನಮಗೂ...' ಎಂಬ ಆಸೆಯಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಸಂಸ್ಕೃತ ಕಲಿತವರು ಮಾತ್ರ ಸ್ವರ್ಗಕ್ಕೆ ಹೋಗುತ್ತಾರೆ ಎಂದರೊಬ್ಬ ಸ್ವಾಮೀಜಿ. ನಿಜವೆ?
ಅವರು ಹೇಳಿದ್ದು 'ಸಂಸ್ಕೃತಿ' ಅಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಣ್ಣಿಗೆ ಬೇಕಾದ್ದು ತಾಳಿಯೋ, ಪ್ರೀತಿಯೋ?
ತಾಳಿಕೆ ಬರುವ ಪ್ರೀತಿ.

ಅನಸೂಯಾ ಟಿ., ಕೇದಿಗೆಮನೆ
ರಿಯಾಲಿಟಿ ಶೋನಲ್ಲಿ ಎಷ್ಟು ಪರ್ಸೆಂಟ್ ರಿಯಾಲಿಟಿ ಇದೆ ಗುರುವೆ?
ಕಾಶಿ ಹಲ್ವಾದಲ್ಲಿ ಕಾಶಿ ಇರುವಷ್ಟು.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ವಿವಾಹದಲ್ಲಿ ಸಪ್ತಪದಿ ತುಳಿಯುವುದು ಏಕೆ?
ವಾರದ ಏಳೂ ದಿನಗಳು ಜೊತೆ ಸಾಗಿರೆಂದು ಸೂಚಿಸಲು.

ಮಲ್ಲಿಕಾರ್ಜುನ, ಸುರಧೇನುಪುರ
ಅಪ್ಪ ಆಲದ ಮರ ಆದರೆ ಅಮ್ಮ?
ದಿನ ಕಳೆದಂತೆ ಅದನ್ನು ಎತ್ತಿಹಿಡಿಯುವ ಬಿಳಲು.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಗಂಗಾ ನದಿಯಲ್ಲಿ ಸ್ನಾನ ಮಾಡಿದಲ್ಲಿ ಪಾಪ ಪರಿಹಾರ ಖಚಿತವೆ?
ನಂಬಿಕೆಗೆ ಸಂಶಯವು ಮಾನದಂಡವಲ್ಲ.

ರಾಜೇಂದ್ರ ಹೆಗಡೆ, ಹಾವೇರಿ
ಹಣೆಯ ಅಗಲ ಕುಂಕುಮದ ಸ್ಥಳದಲ್ಲೀಗ ಚುಕ್ಕಿ. ಏಕೀ ಚಂದ್ರಬೊಟ್ಟಿನ ದ್ವೇಷ, ಚುಕ್ಕಿಬೊಟ್ಟಿನ ಮೋಹ?
ಬಟ್ಟೆ–ಕುಂಕುಮ ಪ್ರೊಪೋರ್ಷನ್ ಅಂತೆ. ಆರು ಗಜ ಸೀರೆಗೆ ಚಂದ್ರಬೊಟ್ಟು; ಪುಟ್ಟಬಟ್ಟೆಗೆ ಚುಕ್ಕಿ.

ಜೀವಿ, ಗೊಂಡೇದಹಳ್ಳಿ
'ನನ್ನ ಅಳಿಯ ದೇವರಂತಹವನು, ಮಗಳೇ ರಾಕ್ಷಸಿ' ಎಂದು ಮಿತ್ರನೊಬ್ಬ ಹೇಳುತ್ತಿರುವನಲ್ಲ ಏಕೆ?
'ದೇವರಂತೆ ನಾಪತ್ತೆಯಾಗುವವನು, ಮಗಳು ಉಗ್ರರೂಪ ತಾಳದಿದ್ದರೆ' ಎಂಬ ಒಳಾರ್ಥವಂತೆ.

ವಿ.ಎಸ್. ಮಾಧವ ಶ್ಯಾನುಭಾಗ, ಕುಂದಾಪುರ
ದ್ರೌಪದಿ ಪಂಚ ಪತಿವ್ರತೆಯರಲ್ಲೊಬ್ಬಳು; ಯಮ ಇಂದ್ರ ರವಿ ಮರುತ ಪಾಂಡುವಿನ ಸತಿ ಕುಂತಿ ಏಕಲ್ಲ?
ಪಾಂಡು ಗತಿಸಿ, ಮಿಕ್ಕವರು ಮಾಯವಾದುದರಿಂದ ಕುಂತಿ ಕ್ವಾಲಿಫೈ ಆಗಲಿಲ್ಲವಂತೆ.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕಾ
ಪರಂಗಿಗಳು ನಮ್ಮ ಜನಕ್ಕೆ ಬಿಟ್ಟುಹೋದದ್ದೇನು?
ಸಿಪ್ಪೆ!

## ಬಹುಮಾನಿತ ಪ್ರಶ್ನೆ

ಜಯಶ್ರೀ, ಬೆಂಗಳೂರು
ಪತಿ ಪ್ರಧಾನಿ, ಪತ್ನಿ ವಿಪಕ್ಷ ನಾಯಕಿ ಆದರೆ ಲೋಕಸಭೆ ಹೇಗಿರಬಹುದು?
ಪ್ರಧಾನಿಯೇ ಆಗಾಗ್ಗೆ ಸಭಾತ್ಯಾಗ ಮಾಡಬೇಕಾಗಬಹುದು.

ಕೆ. ಶ್ರೀನಿವಾಸ್
ಚುನಾವಣೆಯ ಬದಲು ಹೆಚ್ಚು ಭಾಗ್ಯ ಘೋಷಿಸುವ ಪಕ್ಷ ಗೆದ್ದಹಾಗೆ ಎಂದರೆ?
ವೋಟಿಗಾಗಿ ಎಂಜಲು, ಹೆಂಡಕ್ಕೆ ಕೈ ಚಾಚುವವರು ಪ್ರತಿಭಟಿಸುವರು.

ಕಾವ್ಯಶ್ರೀ, ಶೋರಾಪುರ
ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಇರುವವರು ಯಾರು?
ಯಾವ ಭಾಷೆಯಲ್ಲಿ ಹೊಗಳಿ ತೆಗಳಿದ್ದಾರೋ ಆ ಭಾಷೆಯನ್ನು ಎಳ್ಳಷ್ಟೂ ತಿಳಿಯದವರು.

ಬಿ. ಬಸವರಾಜ್, ಹರಿಹರ
ಟೀವಿ ಮೂರ್ಖರ ಪೆಟ್ಟಿಗೆಯಾದರೆ ಮೊಬೈಲ್?



ನುಡಿನಾಶಕ ಚಟಜಾಲ.

ಸಿಹಿಮೊಗೆ ರಮೇಶ್, ಮೈಸೂರು
ರಾಜಕೀಯವು ವೃತ್ತಿಯೋ, ಹವ್ಯಾಸವೋ, ಅನ್ಯ ವ್ಯವಹಾರಗಳಿಗೆ ರಹದಾರಿಯೋ?
ಹೊಸ ತೋಳಗಳಿಗೆ ವೃತ್ತಿ; ಮುದಿಹದ್ದುಗಳಿಗೆ ಹವ್ಯಾಸ; ನರಿಗಳಿಗೆ ರಹದಾರಿ.

ಜಗದೀಶ ಬಿ. ಹೊಸೂರು, ಮೈಸೂರು
ಹಗರಣ ಎಂಬ ಪದ ಯಾವಾಗಿನಿಂದ ಆರಂಭವಾಯಿತು?
ಗಣ ಸೇರಿ ರಣ ಮಾಡಿ ಹಣದ ಹರಣ ಮಾಡಿದಾಗಿನಿಂದ.

■ ರಾಮ್